◆ **ನೀವು ಭಾರತೀಯ ಕಲಾಪ್ರಕಾರಗಳನ್ನು ಇಷ್ಟಪಟ್ಟು ಇದೀಗ ಇಡೀ ಜೀವನವನ್ನೇ ಭರತನಾಟ್ಯ ಕಲಿಕೆಗೆ ಮುಡಿಪಾಗಿಟ್ಟರುವಿರಿ. ಭಾರತದೊಡನೆ ಸುಮಾರು 20 ವರ್ಷಗಳ ಒಡನಾಟ ನಿಮ್ಮದು. ಈ ಸುದೀರ್ಘ ಪಯಣದ ಬಳಿಕ ಭಾರತೀಯ ಸಮಾಜದ ಬಗ್ಗೆ ನಿಮ್ಮ ಅನಿಸಿಕೆ ಏನು?**

ಭಾರತಕ್ಕೆ ಅಂದರೆ ಚೆನ್ನೈ ಕಲಾಕ್ಷೇತ್ರಕ್ಕೆ ನಾನು ಬರಲಾರಂಭಿಸಿ ಎರಡು ದಶಕಗಳು ಕಳೆದಿವೆ. ಕಳೆದ ನಾಲ್ಕೈದು ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದೇನೆ. ಈ ದೀರ್ಘ ಪ್ರಯಾಣದ ಅನುಭವದಲ್ಲಿ ಹೇಳುವುದಾದರೆ, ಭಾರತದಲ್ಲಿರುವ ಸಂಸ್ಕೃತಿ, ಸಾಹಿತ್ಯ ಮತ್ತು ಇಲ್ಲಿನ ಜೀವನ ಸಿದ್ಧಾಂತ ನಿಜವಾಗಿಯೂ ಶ್ಲಾಘನೀಯ. ಆದರೆ ಇಲ್ಲಿ ಏಕೋ, ಏನೋ ಬಹುತೇಕರು ಅಮೆರಿಕದ ದೃಷ್ಟಿಕೋನದಿಂದಲೇ ಜೀವನವನ್ನು ನೋಡಲು ಇಷ್ಟಪಡುತ್ತಿದ್ದಾರೆ. ಆಹಾರ, ವಿಹಾರಗಳಲ್ಲಿ ಅಮೆರಿಕದ ಛಾಪು ಮೂಡಿಸಲು ಯತ್ನಿಸುತ್ತಾರೆ. ಭಾರತದ ಯಾವುದೇ ಮಹತ್ವದ ವಿಷಯವನ್ನು ವಿವರಿಸಲು ಮತ್ಯಾವುದೋ ಒಂದು ಉಪಮಾನವನ್ನು ಇಲ್ಲಿನವರು ಹುಡುಕುತ್ತಾರೆ. ಅದಕ್ಕಿಂತ ಇದು ಉತ್ತಮವೆಂದೋ, ಅವರಿಗಿಂತ ಇವರು ಉತ್ತಮವೆಂದೋ ವಿವರಿಸುವುದು, ಘರ್ಷಣೆಯ ಮೂಲಕ ಪ್ರತಿಪಾದಿಸುವುದು ವಾಡಿಕೆಯಾಗಿದೆ. ಅಂತಹ ಹೋಲಿಕೆಯ ಪ್ರತಿಪಾದನೆಯಿಂದ, ಅಥವಾ ಪ್ರಯತ್ನದಿಂದ ಏನೂ ಪ್ರಯೋಜನ ಕಾಣುವುದಿಲ್ಲ. ಪುರಾತನವಾದುದು ಎಂದು ಒಪ್ಪಿಕೊಳ್ಳಬಹುದಾದರೂ ಗುಣಮಟ್ಟವನ್ನು ಕಾಪಾಡಿಕೊಳ್ಳದೇ ಇದ್ದರೆ ಅದು ಅತ್ಯುತ್ತಮವಾಗಿ ಸಾರ್ವಕಾಲಿಕವಾಗಿ ಉಳಿಯುವುದಾದರೂ ಹೇಗೆ? ಪ್ರಸ್ತುತ ಭಾರತದಲ್ಲಿ ಪರಿಣಾಮಕ್ಕಿಂತ ಪರಿಮಾಣವೇ ಹೆಚ್ಚು ಎಂದು ಭಾವಿಸುತ್ತೇನೆ. ನನ್ನ ಓದು ಮತ್ತು ಅನುಭವದ ಪ್ರಕಾರ ಭಾರತೀಯ ತತ್ತ್ವಶಾಸ್ತ್ರವು ಬಹಳ ಉನ್ನತ ಮಟ್ಟದಲ್ಲಿದೆ. ಅದನ್ನು ಪ್ರತಿಪಾದಿಸಲು ಮತ್ತೊಂದನ್ನು ಎಳೆದುತರುವ ಅಗತ್ಯವೇ ಇಲ್ಲ. ಹೋಲಿಕೆಗಳ ಗಲಾಟೆಯಲ್ಲಿ ಭಾರತೀಯತೆಯ ನಿಜವಾದ ಸತ್ವವು ಮಸುಕಾಗಿಬಿಡುತ್ತಿದೆ.

ಇದಕ್ಕೆಲ್ಲ ವಸಾಹತುಶಾಹಿ ಆಳ್ವಿಕೆಯ ಹಿನ್ನೆಲೆ ಕಾರಣವಿರಬಹುದು. ಒಂದೋ ನಾವು ಹಿಂದೆ ಉಳಿದುಬಿಟ್ಟೆವು ಎನ್ನುವ ಹಳಹಳಿಕೆಯಾಗಲೀ, ಅಥವಾ ಉತ್ತಮಿಕೆಗೆ ಸಂಬಂಧಿಸಿದ ಅತಿಯಾದ ವ್ಯಸನವಾಗಲೀ ಕೇಳಿಸುತ್ತಲೇ ಇರುತ್ತದೆ. ಹೀಗೆ ಮರುಪ್ರತಿಪಾದಿಸುವ ಉತ್ಸಾಹವನ್ನು ತಕ್ಕಮಟ್ಟಿಗೆ ಸಹಜ ಎಂದು ಹೇಳಬಹುದು. ಆದರೆ ಅದು ಮುಗಿದುಹೋದ ಕಥೆಯೆಂದು ಒಪ್ಪಿಕೊಂಡು, ಮುಂದಕ್ಕೆ ನಾವೇನು ಸಾಧಿಸುತ್ತೇವೆ ಎಂದೂ ಆಲೋಚಿಸುವುದು ಇಂದಿನ ಅಗತ್ಯ.

◆ **ನಿಮ್ಮ ಮತ್ತು ಭರತನಾಟ್ಯದ ಮುಖಾಮುಖಿ ಹೇಗಾಯಿತು? ಭರತನಾಟ್ಯವನ್ನೇ ಏಕೆ ಆಯ್ಕೆ ಮಾಡಿಕೊಂಡಿರಿ?**

ಇಟಲಿಯ ಮಿಲಾನ್‌ನಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರವನ್ನು ಅವಿನಾಶ್ ಗಣೇಶ್ ಎಂಬ ಭಾರತೀಯ ಸಂಜಾತ ಕಲಾವಿದರೊಬ್ಬರು ನಡೆಸುತ್ತಿದ್ದಾರೆ. ಅವರು ಇಟಲಿಯ ಮಹಿಳೆಯನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದವರು. ಈ ಸಾಂಸ್ಕೃತಿಕ ಕೇಂದ್ರವು ಭಾರತೀಯ ಜೀವನಶೈಲಿ, ಸಂಸ್ಕೃತಿಯನ್ನು ಅನುಸರಿಸುವ ಒಂದು ಮನೆಯಂತೆ ಇದೆ. ಅಂದರೆ ಬೆಳಗಿನ ಪೂಜೆ, ಉಪಾಹಾರ ಮುಂತಾದ ಚಟುವಟಿಕೆಗಳು, ಆಗೀಗ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು, ನೃತ್ಯಪ್ರಾತ್ಯಕ್ಷಿಕೆ, ಚಿತ್ರ ಪ್ರಾತ್ಯಕ್ಷಿಕೆ, ಚಿತ್ರಕಲೆ, ಹಾಡುಗಾರಿಕೆ ಮತ್ತು ನೃತ್ಯದ ಪರಿಚಯಕ್ಕೆ ಅವಕಾಶ, ಭಾರತೀಯ ಹಬ್ಬಗಳ ಆಚರಣೆ... ಎಲ್ಲರೂ ಒಟ್ಟಾಗಿ ಅಡುಗೆ ಮಾಡುವ ಸಂಪ್ರದಾಯ... ಹೀಗೆ. ನಾನು ಅಲ್ಲಿಗೆ ಹೋದಾಗ ಅದೊಂದು ಬಹಳ ಆಪ್ತವಾದ ಪರಿಸರ ಅನಿಸಿತು. ನನಗೆ ಭರತನಾಟ್ಯ ಕಾರ್ಯಕ್ರಮವನ್ನು ನೋಡುವ ಅವಕಾಶ ಅಲ್ಲಿ ಸಿಕ್ಕಿತು. ನಾನು ಕಾಲೇಜಿನಲ್ಲಿಯೇ ಭಾರತೀಯ ಕಲಾಪ್ರಕಾರಗಳು, ಇಂಡಾಲಜಿ, ತತ್ತ್ವಶಾಸ್ತ್ರವನ್ನು ಆಯ್ಕೆ ಮಾಡಿಕೊಂಡಿದ್ದೆ. ಈ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಓದಿರುವೆ. ಆದ್ದರಿಂದ, ಭರತನಾಟ್ಯವು ನನ್ನ ಆಸಕ್ತಿಯನ್ನು ತಣಿಸುವ ಪರಿಪೂರ್ಣ ಕಲೆ ಎಂದು ನನಗೆ ಭಾಸವಾಯಿತು. ಇದೇ ಕೇಂದ್ರದಲ್ಲಿ ಚೆನ್ನೈ ಕಲಾಕ್ಷೇತ್ರದ ಭರತನಾಟ್ಯ ಗುರು ವಿದುಷಿ ಕೃಷ್ಣವೇಣಿ ಲಕ್ಷ್ಮಣ್ ಅವರ ಶಿಷ್ಯೆಯರಾದ ಮೋನಿಕಾ ಮತ್ತು ಮರೆಸಾ